



# ಹಸಿರು ಪಾರಿವಾಳ

ಪಾರಿವಾಳಗಳನ್ನು ನೀವು ನೋಡಿಯೇ ಇರುತ್ತೀರಿ; ಆದರೆ ಹಸಿರು ಪಾರಿವಾಳಗಳನ್ನು ನೋಡಿದ್ದೀರಾ?

■ ಪ್ರಕಾಶ ಎಸ್. ಮನ್ನಂಗಿ
ಚಿತ್ರ: ಆಕಾಶ

ಕಾಗಿನೆಲೆಯ ಹೊರವಲಯದ ಕೆರೆಯೊಂದರಲ್ಲಿ ವಿದೇಶಿ ಪಕ್ಷಿಗಳು ಬಂದಿವೆಯೆಂಬ ಸುದ್ದಿ ಬಂತು. ಕ್ಯಾಮರ ಹೆಗಲಿಗೇರಿಸಿ ಕೆರೆಯ ಸಮೀಪ ಹೋದಂತೆಲ್ಲ ಬರಿಯ ಕೊಕ್ಕರೆಗಳೇ ಕಾಣಿಸಿದಾಗ ಬೇಸರ. ರಸ್ತೆ ಪಕ್ಕದಲ್ಲಿರುವ ಅರಳೀಮರದ ಕೆಳಗಿನ ಕಲ್ಲುಗಳ ಮೇಲೆ ಕುಳಿತೆವು. ತಲೆ ಮೇಲೆ ಹಣ್ಣುಗಳು ಬೀಳತೊಡಗಿದವು. ಮೇಲೆ ನೋಡಿದರೆ ಗಿಡದಲ್ಲಿ ಕಿಚಪಿಚ ಧ್ವನಿ ಕೇಳಿಸುತ್ತಿತ್ತು. ಗಿಡದ ಎಲೆಗಳ ಮರೆಯಲ್ಲಿ ಪಕ್ಷಿಗಳಿವೆ ಎನಿಸಿತು. ಸೂಕ್ಷ್ಮವಾಗಿ ಪರಿಸೀಲಿಸಿದೆ. ಅರೆ! ಹಸಿರು ಪಾರಿವಾಳ!

ಗಿಡದ ತುಂಬೆಲ್ಲ ಹಳದಿ ಕಾಲಿನ ಹಸಿರು ಪಾರಿವಾಳಗಳು. ಥಟ್ಟನೇ ನೋಡಿದರೆ ಗಿಳಿಗಳಂತೆ ಕಾಣಿಸಿದವು. ಆದರೆ ಅವುಗಳ ಫೋಟೋ ಕ್ಲಿಕ್ಕಿಸುವುದು ಸವಾಲಿನ ಕೆಲಸವಾಗಿತ್ತು. ಏಕೆಂದರೆ ಅವು ಎಲೆಗಳ ಮರೆಯಲ್ಲಿದ್ದು ಹಣ್ಣನ್ನು ಕುಕ್ಕಿ ತಿನ್ನುತ್ತಿದ್ದವು.

ಹಳದಿ ಕಾಲಿನ ಹಸಿರು ಪಾರಿವಾಳಗಳು ಕೋಲಂಬಿಡೇ ಕುಟುಂಬಕ್ಕೆ ಸೇರಿವೆ. ವೈಜ್ಞಾನಿಕವಾಗಿ ಟ್ರೆರಾನ್ ಫೋನಿಕಾಪ್ಟೆರಾ ಎಂದು ಇವುಗಳನ್ನು ಕರೆಯುತ್ತಾರೆ. ಟ್ರೆರಾನ್ ಜಾತಿಯಲ್ಲಿ ಎಲ್ಲವೂ ಹಸಿರು ಪಾರಿವಾಳಗಳೇ. ಇವುಗಳ ಆಹಾರದಲ್ಲಿ ಕ್ಯಾರೋಟಿನೈಡ್ ವರ್ಣಕ ಇರುವುದರಿಂದ ಹಸಿರು ಬಣ್ಣ ಬಂದಿದೆ. ಇದರಲ್ಲೂ ಸುಮಾರು 29 ಪ್ರಭೇದಗಳಿವೆಯಂತೆ. ಬಾಲದ ಆಕಾರದ ಮೇಲಿಂದ ಈ ಪಾರಿವಾಳಗಳನ್ನು ವಿವಿಧ ಪ್ರಭೇದಗಳಾಗಿ ವಿಂಗಡಿಸಲಾಗಿದೆ.

ಹಸಿರು ಪಾರಿವಾಳಗಳು ರಸ್ತೆ ಪಕ್ಕದ ಆಲ ಮತ್ತು ಅರಳಿ ಮರಗಳಲ್ಲಿ ಕಂಡುಬರುತ್ತವೆ. ಹೆಚ್ಚಾಗಿ ಮರವಾಸಿಗಳು. ಅಲ್ಲೇ ಗೂಡು ಕಟ್ಟಿಕೊಳ್ಳುತ್ತವೆ. ಅಪರೂಪಕ್ಕೆ ನೆಲದ ಮೇಲೆ ಬರುತ್ತವೆ. ಏಷ್ಯಾ, ಆಫ್ರಿಕ ಖಂಡಗಳಲ್ಲಿ ಎಲ್ಲ ಕಡೆ ಕಂಡುಬರುತ್ತವೆ.

ಹಸಿರು ಪಾರಿವಾಳಗಳು ಜೋಡಿಯಾಗಿ ಇಲ್ಲವೇ 5– 10ರ ಗುಂಪಿನಲ್ಲಿ ಇರುತ್ತವೆ. ಸಾಮಾನ್ಯವಾಗಿ 250 ಗ್ರಾಂ ತೂಗುವ ಇವು 29–33 ಸೆಂ.ಮೀ. ಉದ್ದವಾಗಿವೆ. ದೇಹವು ಹಳದಿ ಮಿಶ್ರಿತ ಹಸಿರಾಗಿದೆ. ಮೇಲ್ಭಾಗದಲ್ಲಿ ಮಂದವಾಗಿದೆ. ನೀಲಿ ಬೂದು ಬಣ್ಣದ ನೆತ್ತಿಯಿದೆ.

ಸಪ್ಪಳ ಮಾಡುತ್ತ ವೇಗವಾಗಿ ಹಾರುವುದು ಇವುಗಳ ವಿಶೇಷ. ಮೆಲುವಾದ ಸಂಗೀತದ ಹತ್ತಾರು ಸಿಳ್ಳೆಗಳನ್ನು ಹಾಕಿ ಪರಿಸರದಲ್ಲಿ ತನ್ನ ಇರುವಿಕೆಯನ್ನು ಸೂಚಿಸುತ್ತದೆ. ಕಣ್ಣು ಗುಡ್ಡೆಯ ಸುತ್ತಲ ಹೊರ ವೃತ್ತಾಕಾರ ಗುಲಾಬಿ ಮಿಶ್ರಿತ ಕೆಂಪು, ಒಳಭಾಗ ತೆಳು ನೀಲಿಯಾಗಿದೆ. ಹಣ್ಣು ಮತ್ತು ಬೀಜಗಳು ಇವುಗಳ ಆಹಾರ.

ಸಂತಾನಾಭಿವೃದ್ಧಿ: ಈ ಪಾರಿವಾಳಗಳಲ್ಲಿ ಗಂಡು ಮತ್ತು ಹೆಣ್ಣುಗಳನ್ನು ಗುರುತಿಸುವುದು ಪುಕ್ಕಗಳ ಮೂಲಕ. ಗಂಡು ಮತ್ತು ಹೆಣ್ಣಿನ ಪುಕ್ಕಗಳಲ್ಲಿ ಭಿನ್ನತೆಯಿದೆ. ಮಾರ್ಚ್‌ನಿಂದ ಜೂನ್‌ವರೆಗಿನ ಕಾಲ ಸಂತಾನಾಭಿವೃದ್ಧಿಯ ಅವಧಿ. ಈ ಹಕ್ಕಿಗಳ ಪ್ರಣಯದ ಪ್ರದರ್ಶನವೂ ರೋಚಕವಾಗಿದೆ. ಗಂಡು ತನ್ನ ಗಂಟಲು ಮತ್ತು ಎದೆಯನ್ನು ಉಬ್ಬಿಸುತ್ತದೆ. ತನ್ನ ರೆಕ್ಕೆಗಳನ್ನು ಮುಚ್ಚಿ, ಪುಕ್ಕಗಳನ್ನು ಕದಡುತ್ತದೆ. ಬೆಡಗಿನಿಂದ ಮೇಲಿನ ಮತ್ತು ಕೆಳಗಿನ ಟೊಂಗೆಗಳಿಗೆ ಜಿಗಿಯುತ್ತ, ತಲೆಯನ್ನು ಅಲ್ಲಾಡಿಸುತ್ತ, ಸಣ್ಣಗೆ ಸಿಳ್ಳೆ ಹೊಡೆಯುತ್ತ, ಹೆಣ್ಣಿನ ಹಿಂದೆ ಮುಂದೆ ಸುತ್ತತೊಡಗುತ್ತದೆ. ಕೆಲವು ಸಲ ಹೆಣ್ಣು ಹಕ್ಕಿಯೂ ಇಂತಹದ್ದೇ ಪ್ರದರ್ಶನ ಮಾಡುವುದುಂಟು. ಹೆಣ್ಣಿನ ಪ್ರೇಮ ಸಂಕೇತ ದೊರೆತೊಡನೆ ಕೂಡುತ್ತವೆ.

ಗೂಡನ್ನು ಮರದ ಟೊಂಗೆಯಲ್ಲೇ ಕಟ್ಟುತ್ತವೆ. ಹೆಣ್ಣು 1–2 ಬಿಳಿಯ ತತ್ತಿಗಳನ್ನು ಇಡುತ್ತದೆ. ತತ್ತಿಗಳಿಗೆ ಕಾವು ಕೊಡುವ ಮತ್ತು ಪಾಲನೆಯ ಕೆಲಸದಲ್ಲಿ ಗಂಡು– ಹೆಣ್ಣು ಎರಡರದ್ದೂ ಸಮಪಾಲು. ಸಾಮಾನ್ಯವಾಗಿ 13ರಿಂದ 15 ದಿನಗಳ ಕಾಲ ಕಾವು ಕೊಡುತ್ತವೆ. ಅನಂತರ ಮರಿಗಳು ತತ್ತಿಗಳಿಂದ ಹೊರಬಂದು ಸ್ವತಂತ್ರವಾಗಿ ಹಾರಿಹೋಗುತ್ತವೆ. ಮರಿಗಳು ಅಪ್ಪ– ಅಮ್ಮನ ಗುಂಪನ್ನು ಅಥವಾ ಬೇರೆ ಗುಂಪನ್ನು ಸೇರಿಕೊಳ್ಳುತ್ತವೆ. ●